ಕಾಗತ್ತದೆ, The Hon'ble Member is entitled to know the reasons for postponing his Question I don't think this is correct.

ಶ್ರೀ ಹೆಚ್.ಜಿ. ಗೋವಿಂದೇಗೌಡ.—ನಿನ್ನೆ–ಮೊನ್ನೆ ಸಿಪಿಐ ಕಚೇರಿಯಲ್ಲಿ ಮುಷ್ಕರ ಇದ್ದ ಕಾರಣ, ಉತ್ತರವನ್ನು ತರಿಸಲು ಸಾಧ್ಯವಾಗಲಿಲ್ಲ. ಇದರ ಬಗ್ಗೆ ನಾನು ಮಾನ್ಯ ಸಭಾಧ್ಯಕ್ಷರಿಗೆ ಬರೆದು ತಿಳಿಸಿದ್ದೇನೆ. ಈ ಪ್ರಶ್ನೆಯನ್ನು ವಿಥೆಲ್ಡ್ ಮಾಡಬೇಕು. ಎಂದು ಇನ್ನು ೨ ದಿವಸಗಳಲ್ಲಿ ಉತ್ತರ ತರಿಸುತ್ತೇನೆ.

ರಾಜ್ಯದಲ್ಲಿರುವ ಉರ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳು.

೧೬೭೦ ಶ್ರೀ ಆರ್. ರೋಷನ್‌ಬೇಗ್ (ಶಿವಾಜಿನಗರ)—ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಉರ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಸಂಖ್ಯೆ ಎಷ್ಟು

ಆ) ಉರ್ದು ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿರುವ ಕನ್ನಡ ಶಿಕ್ಷಕರ ಖಾಲಿ ಹುದ್ದೆಗಳ ಸಂಖ್ಯೆ ಎಷ್ಟು

ಇ) ಹಾಗಿದ್ದಲ್ಲಿ ಸರ್ಕಾರದವರು ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿರುತ್ತಾರೆ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).—

ಅ) ೨೮೫೯

ಆ) ೧೦೪

ಇ) ಗುತ್ತಿಗೆ ಆಧಾರದ ಮೇಲೆ ಅಭ್ಯರ್ಥಿಗಳನ್ನು ನೇಮಕ ಮಾಡುವುದರ ಮೂಲಕ ಈ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ನೇರ ನೇಮಕಾತಿ ಮೂಲಕ ಖಾಯಂ ನೇಮಕಾತಿ ನಡೆಸುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

SRI R. ROSHAN BAIG.—In the reply, the Hon'ble Minister has stated that there are 104 Kannada teachers vacancies in Urdu Primary and Middle Schools and these posts have been filled by appointing candidates on contract basis The Hon'ble Minister also further stated in his reply that appointment of permanent candidate through direct recruitment is under examination of Government. ಈ ಲೆಕ್ಕ ಸಂಖ್ಯೆಗಳನ್ನು ಕೊಟ್ಟಿರುವುದು ಸರಿಯಾಗಿದೆಯೇ ಎಂಬ ಬಗ್ಗೆ ನನಗೆ ಸಂಶಯ ಬಂದಿದೆ. ನೀವು ಅಂಡರ್ ಎಗ್ಸಾಮಿನೇಶನ್ ಎಂದು ಹೇಳಿದರೆ ಅರ್ಥವಾಗುವುದಿಲ್ಲ. ಯಾವಾಗ ಮಾಡುತ್ತೀರೆಂಬುದನ್ನು ತಿಳಿಸಬೇಕು. ಈಗ ಏನಾಗಿದೆ ಎಂದರೆ, ಎಷ್ಟೋ ಅಭ್ಯರ್ಥಿಗಳಿಗೆ ಕನ್ನಡ ಬರುವುದಿಲ್ಲವೆಂದು ನ್ಯಾಕ್ಷಿಯಲ್ಲಿ ಅನಾನುಕೂಲವಾಗಿದೆ. ಇದರಿಂದ ಅಲ್ಪಸಂಖ್ಯಾತರು ತೊಂದರೆಗೀಡಾಗಿದ್ದಾರೆ. I therefore request the Government to immediately fill up there vacancies.

ಶ್ರೀ ಹೆಚ್. ಜಿ. ಗೋವಿಂದೇಗೌಡ.—ಹಂಗಾಮಿಯಾಗಿ ೧೦೪ ಉಪಾಧ್ಯಾಯರುಗಳನ್ನು ಗುತ್ತಿಗೆ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತದೆ. ಅವರನ್ನು ರಿಲೀವ್ ಮಾಡಿದ ಮೇಲೆ, ಡಿಎಆರ್‌ಸಿ ಮುಂದೆ ಅವರು ಹೋಗಿ ಖಾಯಮ್ಮಾಗಲು ಅರ್ಹತೆ ಪಡೆಯಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ವೇದಾಂತ ಹೆಬ್ಬಾಮ್ಮಿಗೆಯವರ ಪ್ರಶ್ನೆಯನ್ನು ಮುಂದಕ್ಕೆ ಹಾಕಲಾಗಿದೆ.